46/12
1

Regd No M 1299 Sri ತಾ: 10—12—51

SATYAVADI = 35th Year

# ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

## ವೇಶ್ಯಾವೃತ್ತಿ ಪತ್ತೆ

ಷಹಂಕ್ ಪುರದಲ್ಲಿ ಓರ್ವ ವೇಶ್ಯೆಯ ಮನೆಯಲ್ಲಿ 64 ಮಂದಿ ವೇಶ್ಯಾವೃತ್ತಿಗೆ ಎಳೆಯಲ್ಪಟ್ಟ ಹುಡುಗಿಯರು ಇದ್ದುದು ಪತ್ತೆ ಹಚ್ಚಿ ಅವರನ್ನು ಅವರವರ ಊರಿಗೆ ಕಳುಹಿಸಲಾಯಿತೆಂದು ವರ್ತಮಾನ ಬಂದಿದೆ.

× ಮಲಬಾರಿನಲ್ಲಿ ಕೆ. ಎಂ. ಪಿ. ಮತ್ತು ಕಮ್ಯುನಿಸ್ಟ್ ಪಕ್ಷ ಚುನಾವಣಾ ಮೈತ್ರಿಗೆ ಬಂತೆಂದು ಕಲ್ಕತ್ತಾ ವಾರ್ತೆ.

ಉಡ್‌ಲಾಂಡ್

6th Week

ನೇ ವಾ ರ

ಗು ಮಾ ನ್ತ

ಸುಮನೋಹರ ಸಾಮಾಜಿಕ ಹಿಂದಿ ಚಿತ್ರ

ಪಾತ್ರ— ನಿಗಾರ್, ವಾಸ್ತಿ,

ಮಿರ್ಜಾ ಮುಷ್ತಾಫ್, ಕುಲದೀಪ್

ರಣಜಿತ್

ಯಶಸ್ವಿ 3 ನೆ ವಾರ

ಜೆ ಮಹಾಕಾಳಿ

ಪಾತ್ರ- ನಿಗೂಪಣ್ಣಾ, ಸಾಹುಮೋಡಕ

ಮುಂದಿನ ಬದಲಾವಣೆ

ನ ಜ್ ನೀ ನ್

OPERA—

From 8 th Dec.

BRAVE BULLS

Starring—

Mel Ferrer — Miroslava

## ಪೇಷಾವರ ಮತದಾನ

### ಪ್ರಥಮ ದಿನ ಸ್ತ್ರೀಯರಿಲ್ಲ

ಪೇಶಾವರ ಜಿಲ್ಲೆಯಲ್ಲಿಯ ನಾಲ್ಕು ಮತದಾರ ಸಂಘಗಳಲ್ಲಿ, ಸ್ತ್ರೀಮತದಾರರಿಗೆ ಕಾದಿಟ್ಟ ಮೊದಲನೇ ದಿನ ಮತದಾನ ಮಾಡುವದಕ್ಕೆ ಯಾವ ಹೆಂಗಸರೂ ಬಂಲೇ ಇಲ್ಲ

## ಕಾಂಗ್ರೆಸಿಗೆ ಮಹಾಸಭೆ

### ಸ್ವಯಂಸೇವಕ ಸಂಘದ ಬೆಂಬಲ

ಠಾಣಾ ನಗರ ಮತದಾರ ಸಂಘದಿಂದ ಅಸೆಂಬ್ಲಿಗೆ ನಿಂತ ಕಾಂಗ್ರೆಸಿನ ಶ್ರೀ ಎಂ. ಪಿ. ಹೆಗಡೆ ಅವರಿಗೆ ಹಿಂದೂಮಹಾಸಭಾ ಹಾಗೂ ಆರ್. ಎಸ್. ಎಸ್. ದ ಕಾರ್ಯಕರ್ತರು ಹಾಗೂ ಸಹಾಯಕರು ಸಂಪೂರ್ಣ ಬೆಂಬಲ ನೀಡುವರೆಂದು ಅಧಿಕೃತ ರೀತಿಯಿಂದ ತಿಳಿಯಲಾಗುತ್ತಿದೆ.

## ಮರಾಟಿಯಲ್ಲಿ ಮತದಾರಪಟ್ಟಿ

ವರಾತಿಯಲ್ಲಿ ಮತದಾರಪಟ್ಟಿ ಸಿದ್ಧ ಮಾಡಲು ಬೆಳಗಾವಿ ಪೌಂಸಭೆ ತೀರ್ಮಾನಿಸಿದೆ. ಈ ಬಗ್ಗೆ ಕನ್ನಡಿಗರು ಪ್ರತಿಭಟಿಸಬೇಕು.

## ಪ್ರಜೆಗಳಿಗಾಗಿ ದುಡಿತ

ಹೊಟ್ಟೆಗೆ ಸರಿಯಾಗಿ ಅನ್ನವಿಲ್ಲ, ಕಣ್ಣಿಗೆ ಸರಿಯಾಗಿ ನಿದ್ದೆಯಿಲ್ಲ ಸಚಿವಮಂಡಲ ಸೇರಿದ ನೇಲೆ ಜನತೆಗಾಗಿ ಹಗಲು ರಾತ್ರಿ ಎನ್ನದೇ ಒರೀ ದುಡಿವುದೇ ಆಗಿದೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಬಂದೀಖಾನೆಯಲ್ಲಿದ್ದುದೇ ನನಗೆ ಸುಖನಿದ್ರೆಯಾಗಿತ್ತು ಎಂದು ಶ್ರೀ ಕೆ ಸಿ ರೆಡ್ಡಿ ಬಂಗಾರಪೇಟೆಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದ್ದಾರೆ ಅತ್ಯಧಿಕ ಬಹುಮತ ಪಡೆದು ಕಾಂಗ್ರೆಸ್ಸೇ ಮತ್ತೆ ರಾಜ್ಯಾಡಳಿತ ವಹಿಸುವದೆಂದು ಅವರು ತಿಳಿಸಿದರು

— ಅಮರಾವತಿ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಕಾಂಗ್ರೆಸ್ ಉಮೇದುವಾರರಾಗಿ ಡಾ|| ಪಿ ದೇಶಮುಖ್ ಉಮೇದುವಾರರು. ಆದರೆ ಅವರ ಪತ್ನಿ ಕಾಂಗ್ರೆಸಿನ ಅಧಿಕೃತ ಉಮೇದ್ವಾರರು ಈಗ ಗಂಡನನ್ನು ಕಾರಣ ಕೇಳಿಲಾಗಿದೆ

# ಧನಬಲದಿಂದ ಕಾಂಗ್ರೆಸ್

# ಚುನಾವಣೆಯಲ್ಲಿ ಗೆಲ್ಲಬೇಕು

## ಶ್ರೀ ಕೆ. ಸಿ. ರೆಡ್ಡಿ ಭಾಷಣ

ಮೊನ್ನೆ ಸಂಜೆ ಮೈಸೂರು ಪುರಭವನ ಮೈದಾನದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಾ ಕಾಂಗ್ರೆಸ್ ಉಮೇದುವಾರಂಗೆ ಓಟು ಮಾಡಿರೆಂದು ಪ್ರಾರ್ಥಿಸಿದರು ಭಾಷಣ ಅರ್ಧ ತೀರುವ ವೇಳೆಗೆ ಗಲಾಟೆ ಆರಂಭವಾಗಿ ಕೊನೇ ವರಿಗೆ ಇದ್ದಿತು.

## ವಿನಾಯಿತಿ ಆಜ್ಞೆ

ಭಾರತ ಅಧ್ಯಕ್ಷರು ಮೈಸೂರಿಗೆ 371 ನೇ ವಿಧಿಯನ್ನ ಮನ್ನಾ ಮಾಡಿರುವದಾಗಿ ದೆಹಲಿ ವಾರ್ತೆ.

## ಇಟಲಿಗೆ ಸಿಕ್ಕಿತು

ವಿಶ್ವಸಂಸ್ಥೆಗೆ ಇಟಲಿಯನ್ನು ಸೇರಿಸಿಕೊಳ್ಳಲಾಯಿತೆಂದು ಪ್ಯಾರಿಸ್ ವಾರ್ತೆ

## ಇಂಥ ಮಂತ್ರಿಗಳು ಬೇಡ

ಭಾರತದ ಆಹಾರ ಉಪ-ಸಚಿವ ಶ್ರೀ ತಿ.ಮಲರಾಯರು ಕಾಕಿನಾಡದಲ್ಲಿ ಭಾಷಣ ಮಾಡುತ್ತಿದ್ದಾಗ ಜನ ಗಲ್ಲೆಬ್ಬಿಸಿ ಇಂಥಹ ಸಚಿವರು ಕೂಡದೆಂದು ಜೊಬ್ಬೆ ಹಾಕಿದರೆಂದು ತಿಳಿಯಲಾಗಿದೆ.

## ನಿಷೇಧ ಜಾರಿ

ಕಿಸಾನ್ ಮಜದೂರ್ ಪಕ್ಷದ ಶಾಸನ ಸಭೆ ಉಮೇದವಾರಾದ ಶ್ರೀ ಭಗವಂತರಾವ್ ಎಂಬವರು ಪೋಲೀಸರನ್ನು ಬೆದರಿಸಿದ ಆಪಾದನೆ ಮೇಲೆ, 2 ತಿಂಗಳ ಕಾಲ ಎಲ್ಲೂ ಭಾಷಣ ಮಾಡಬಾರದೆಂದು ಪ್ರತಿಬಂಧಕಾಜ್ಞೆ ಹಿಡಿಸಲಾಗಿದೆ

## ಮೈಮೇಲೆ ಗುರುತುಗಳು

ದಿಂಡಿಗಲ್ಲಿನಿಂದ ಶಾಸನ ಸಭೆಗೆ ನಿಂತಿರುವ ಸ್ವತಂತ್ರ ಉಮೇದುವಾರನೊಬ್ಬನು ಪ್ರಚಾರ ಕಾರ್ಯಕ್ಕೆ ಒಂದು ಆನೆಯನ್ನು ತಂದಿದ್ದು ಅದರ ಮೈಮೇಲೆಲ್ಲ ಕನ್ನ ಹೂವಿನ ಗರ್ತನ್ನು ಬರೆದು ತನ್ನ ಕ್ಷೇತ್ರದಲ್ಲಿ ಓಡಾಡಿಸುತ್ತಿದ್ದಾರೆ

## ಸತ್ಕಾರಕೂಟ

ಮೊನ್ನೆ ಮೈಸೂರು ಸುತ್ತೂರು ವಿದ್ಯಾರ್ಥಿನಿಲಯ ಸಂಘದಲ್ಲಿ ವೀರಶೈವ ಪದವೀಧರರಿಗೆ ಸತ್ಕಾರಕೂಟ ಏರ್ಪಡಿಸಲಾಗಿತ್ತು. ಜಗದ್ಗುರು ಶ್ರೀ ಗಾರೀಶಂಕರ ಸ್ವಾಮೀಜಿಯವರು ಭಾಷಣ ಮಾಡಿದರು.

## ಅಣು ಆಯುಧ ಕೊಡಲಾಗುತ್ತೆ

ಸಧ್ಯದಲ್ಲಿಯೇ ಅಮೇರಿಕಾ ಸೈನಿಕರಿಗೆ ಅಣು ಶಸ್ತ್ರಾಸ್ತ್ರ ಕೊಡಲಾಗುವದೆಂದು ಸೈನ್ಯದ ಪ್ರಧಾನಾಧಿಕಾರಿಗಳು ತಿಳಿಸಿರುವರು

## ಭಂಗಾರ ಪತ್ತೆ

ಪರ್ಷಿಯ ಕೊಲ್ಲಿಯಿಂದ ಡರೇಸ ಹಡಗಿನಲ್ಲಿ ಬಚ್ಚಿಟ್ಟು ತಂದಿದ್ದ 4 ಲಕ್ಷ ರೂ. ಬೆಲೆಯ ಭಂಗಾರವನ್ನು ಸುಂಕದ ಅಧಿಕಾರಿಗಳು ವಶಪಡಿಸಿಕೊಂಡರು. 2 ವಾರಗಳಲ್ಲಿ ಭಂಗಾರ ಸುಂಕದ ಅಧಿಕಾರಿಗಳು ರೂ 36 ಲಕ್ಷ ಭಂಗಾರವನ್ನು ವಶಪಡಿಸಿಕೊಂಡಿರುತ್ತಾರಿದೆ.

## ಹಣ ವಾಪಸು ಮಾಡಿ

ಪಾರ್ಲಿಮೆಂಟ್ ಮುಕ್ತಾಯಗೊಳಿಸಲಾದ್ದರಿಂದ ಸದಸ್ಯರಿಗೆ ಮುಂಗಡ ಇತ್ತಿದ್ದ ವೇತನವನ್ನು ವಾಪಸು ಮಾಡಲು ಆರ್ಥಿಕ ಶಾಖೆಯವರು ತಿಳಿಸಿದ್ದಾರೆ

## ಕಾಂಗ್ರೆಸಿಗೆ ಗೆಲುವು

ಭಾರತ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ವಿಜಯಿಗೊಂಡು ಅಧಿಕಾರಕ್ಕೆ ಬರುವದೆಂದು ಲಂಡನ್ನಿನ ನ್ಯೂ ಸ್ಟೇಟ್‌ಮ್ಯಾನ್ ಮತ್ತು ನೇಷನ್ ಪತ್ರಿಕೆ ಅಭಿಪ್ರಾಯಪಟ್ಟಿದೆ

## ಮಾವನಿಗೆ ಕೊಲೆ

ಕಾಸಿಕೋಡಿನಲ್ಲಿ ಅನೆಯೊಂದು ತನ್ನ ಮಾವನಿಗೆ ತುಳಿದುಕೊಂದಿತು

## ಪ್ರಾರಂಭೋತ್ಸವ

ನಿನ್ನೆ ಬೆಳಿಗ್ಗೆ 10 ಗಂಟೆಗೆ ಮೈಸೂರು ಟೀಚರ್ಸ್ ಕಾಲೇಜಿನಲ್ಲಿ ಅಖಿಲ ಮೈಸೂರು ಟೀಚರ್ಸ್ ಸಂಮೇಳನವನ್ನು ಮಹಾರಾಜ ಕಾಲೇಜ್ ಪ್ರಿನ್ಸಿಪಾಲ್ ಡಾ|| ಎಂ ವಿ ಗೋಪಾಲಸ್ವಾಮಿಯವರು ಪ್ರಾರಂಭ ಮಾಡಿದರು

## ನಗರ ಕಾಂಗ್ರೆಸ ಸಮಿತಿ

ಈ ದಿನ ಸಂಜೆ 6 ವರೆ ಗಂಟೆಗೆ ಮೈಸೂರು ಟವರ್ ಹಾಲ್ ಮೈದಾನದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಭಾಷಣ ಮಾಡುತ್ತಾರೆ ಮಹಾಜನರು ದಯವಿಟ್ಟು ಬರಬೇಕಾಗಿ ಏನಂತಿ

## ಜಯಪ್ರಕಾಶರ ಹೇಳಿಕೆ

ಕಾಂಗ್ರೆಸೇತರಾದರೂ ಮಹಾಚುನಾವಣೆಯಲ್ಲಿ ಗೆಲ್ಲುವದಾದರೆ ಅದು ಹಣದೆಸೆಯಿಂದ ಎಂದು ಶ್ರೀ ಜಯಪ್ರಕಾಶ ನಾರಾಯಣರು ಮದರಾಸಿನಲ್ಲಿ ಹೇಳಿಕೆ ಇತ್ತಿದ್ದಾರೆ

Change of Premises

The Eye Sight Institute

— is shifted to —

1288 Krishnamurthypuram

Mysore

ಸಂಪುಟ ೧೦ ಸಂಚಿಕೆ ೧೬ ॥ ಶ್ರೀ ॥ ತಾ॥ 10–12–1951

# — ಪ್ರ ಬೋ ಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಠಾಧೀಶ್ವರರಾದ
**ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ**
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

## .... ಗೀ ತಾ ವಿ ಜ್ಞಾ ನ ....

( ಮುಂದುವರಿದದ್ದು )

ಗೀತೆಯನ್ನುತ್ತದೆ—ಯಜ್ಞವೂ ನಾನು, ಸ್ವಧೆಯೂ ನಾನು, ಪಿತೃವೂ ನಾನು ಪಿತೃವಿಗೀಯುವ ಅನ್ನವೂ ನಾನು, ಔಷಧವೂ ನಾನು, ಅದರಿಂದುಂಟಾಗುವ ಅನ್ನವೂ ನಾನು, ನಾನೇ ವಂತ್ರ, ನಾನೇ ತುಪ್ಪ, ನಾನೇ ಅಗ್ನಿ, ಆಹುತಿಯೂ ನಾನು ಪಿತಾ ಮಾತಾ, ಧಾತಾ, ಪಿತಾಮಹ ಎಲ್ಲಾ ನಾನು ಜ್ಞಾನವೂ ನಾನು, ಜ್ಞೇಯವೂ ನಾನು, ಗತಿ ಪೋಷಕ, ಪ್ರಭು, ಸಾಕ್ಷಿ, ನಿವಾಸ ಎಲ್ಲಾ ನಾನು. ಎಲ್ಲಕ್ಕಿಂತ ಶ್ರೇಷ್ಠನಾದ ಅಕ್ಷರ, ಎಂದೂ ನಷ್ಟವಾಗದಿರುವ ತತ್ವವೂ ನಾನು. ಎಲ್ಲಾ ಭೂತಗಳೊಳಗೂ ಇರುವ ಸತ್, ಅಸತ್ತಿಗಿಂತ ಮೀರಿರುವ ತತ್ವವು ನಾನು, ಅದೇ ಎಲ್ಲಾ ಭೂತಗಳಿಗೂ ಆದಿ, ಮಧ್ಯ, ಅಂತವಾಗಿದೆ. ಅದೇ ತತ್ವವು ಎಲ್ಲಾ ಪ್ರಾಣಿಗಳೊಳಗಿದ್ದು ಅವುಗಳನ್ನು ನಡೆಸುತ್ತದೆ.

ಗೀತೆಯು ಈ ವೈಜ್ಞಾನಿಕ ತತ್ವವು ಎಷ್ಟೋ ಸಾವಿರ ವರ್ಷಗಳ ಹಿಂದೆಯೆ ಗ್ರಂಥ ರೂಪವಾಗಿ ಪ್ರಕಾಶಿತವಾಗಿದೆ. ಈ ಸಮಯದಲ್ಲಿ ವಿಜ್ಞಾನದ ಅನುಸಂಧಾನದ ಫಲವಾಗಿ ಈಗೊಂದು ಹೊಸ ಸಿದ್ಧಾಂತವನ್ನು ನಿಶ್ಚೈಸಿದ್ದಾರೆ. ಇದರ ಹೆಸರು ಅವಿನಾಶಿ ತತ್ವ ಸಿದ್ಧಾಂತ ( Indistructibility of Matter ) ಸೃಷ್ಟಿಯು ಇದೇ ತತ್ವದ ವ್ಯಾಪಾರ, ಅದನ್ನು ಕಾಸ್ಮಿಕ್ ರಿಫ್ಲೆಕ್ಸ್ ಆಕ್ಷನ್ ಎಂದೆನ್ನುತ್ತಾರೆ ಗೀತಾನುಸಾರವಾಗಿ ಈ ಅವಿನಾಶೀ ತತ್ವವು ಚೇತನಸಂಚೇತನ ಬ್ರಹ್ಮದ ಶಕ್ತಿಯು ಪ್ರಕಟವಾಗುವುದಕ್ಕೇ ಪ್ರಕೃತಿ ಎಂದು ಹೆಸರು ಸತತ ಪರಿವರ್ತನಶೀಲವಾದ ಪ್ರಪಂಚವಿರುವದು ಪುನಃಸತ್ಯವು ಆಧ್ಯಾತ್ಮಿಕ ಸ್ವಭಾವ. ಪ್ರಪಂಚಕ್ಕಿಂದು ಬೇರೆ ಸತ್ಯವಿಲ್ಲ. ಈ ಪರಮ ಸತ್ಯವು ಸ್ವಯಂ ಚೇತನ ಅತನು ಸ್ವಯಂ ಕಾರಣ ಮತ್ತು ಕಾರ್ಯ. ವೇದಾಂತದ ಪರಿಭಾಷೆಯಲ್ಲಿ ಅಧಿಷ್ಠಾನವೆನ್ನುತ್ತಾರೆ, ಗೀತೆಯ ಪರಿಭಾಷೆಯಲ್ಲಿ ಅತನು ನಿರ್ಗುಣ, ಅಗೋಚರ, ಕಲ್ಪನಾತೀತ, ಅಕ್ಷರ, ಅವ್ಯಯ, ಅಖಂಡ, ನಿರಾಕಾರ, ಅಪರಿಚ್ಛಿನ್ನ, ವ್ಯಾಪಕ, ಅನಂತ, ಅವಿನಾಶಿ, ಚೇತನ, ನಿರ್ಮಲ, ಸರ್ವವ್ಯಾಪಕ ಈ ಸಿದ್ಧಾಂತವು ಕಮ್ಮಿಯೆಂದರೆ ಐದು ಸಾವಿರ ವರ್ಷದ ಅನುಭವದ ಫಲ, ಐನೂರು ವರ್ಷದ ಅನುಭವದ್ದಲ್ಲ

ಗೀತೆಯು ಈ ಮಹಾ ತತ್ವವನ್ನು ಪ್ರತಿಪಾದಿಸಿ, ವ್ಯಷ್ಟಿ ಮತ್ತು ಸಮಷ್ಟಿಗಳಲ್ಲಿ ಈ ತತ್ವದ ವ್ಯಾಪಕತೆಯನ್ನು ತಿಳಿಸಿ, ಎರಡರಲ್ಲಿ ಐಕ್ಯವನ್ನು ಸ್ಥಾಪಿಸಿದೆ ಮತ್ತು ಇಡೀ ಜಗತ್ತಿನಲ್ಲಿ ಒಂದಾಗಿ ಹಿತಪ್ರೋತವಾಗಿರುವ ತತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂದು ತಿಳಿಸಿದೆ. 6 ನೇ ಅಧ್ಯಾಯದ 30 ನೇ ಪದ್ಯದಲ್ಲಿ ಹೀಗಿದೆ— " ಯಾರು ನನ್ನನ್ನು ಎಲ್ಲಾ ಸ್ಥಾನಗಳಲ್ಲಿಯೂ, ಎಲ್ಲವನ್ನೂ ನನ್ನಲ್ಲಿಯೂ ನೋಡುತ್ತಾರೆಯೋ, ಅವರನ್ನು ನಾನೆಂದೂ ಅಗಲುವುದಿಲ್ಲ ಅವರೂ ನನ್ನಿಂದ ದೂರವಿರುವುದಿಲ್ಲ " 8ನೇ ಅ. ದ 7 ನೇ ಪದ್ಯದಲ್ಲಿ ' ನನ್ನಲ್ಲಿ ಪುನಸ್ಸಮ್ಮಿಳಿತ ಬುದ್ಧಿಯನ್ನು ಅರ್ಪಿಸಿದರೆ ಮನುಷ್ಯನು ನನ್ನೊಳಗೆ ಸೇರುವನು " ಎಂದಿದೆ. 9 ನೇ ಅಧ್ಯಾಯದ 34 ನೇ ಪದ್ಯದಲ್ಲಿ ' ನನ್ನಲ್ಲಿ ಮನವಿಡು, ನನ್ನ ಭಕ್ತನಾಗು, ನನ್ನನ್ನು ಪೂಜಿಸು, ನನ್ನನ್ನು ವಂದಿಸು " ಎಂದಿದೆ 12 ಅ. ದ 8 ನೇ ಪದ್ಯದಲ್ಲಿ " ನನ್ನಲ್ಲಿ ಮನವಿಟ್ಟು ಸದಾ ಯುಕ್ತಚಿತ್ತನಾಗಿ ಪರಮಶ್ರದ್ಧೆಯಿಂದ ನನ್ನ ಉಪಾಸನೆ ಮಾಡು " ಎಂದಿದೆ. ಇದೇ ಅ. ದ 3 ನೇ ಪದ್ಯದಲ್ಲಿ ' ಅವ್ಯಕ್ತ, ಸರ್ವವ್ಯಾಪಿ, ಅಚಿಂತ್ಯ, ಕೂಟಸ್ಥ, ಅಚಲ, ನಿತ್ಯ, ಅಕ್ಷರ, ಬ್ರಹ್ಮದ ಉಪಾಸನೆ ಮಾಡು " ಎಂದಿದೆ. 14 ನೇ ಪದ್ಯದಲ್ಲಿ ' ನಿನ್ನ ಮನಸ್ಸು ಬುದ್ಧಿಯನ್ನು ನನ್ನಲ್ಲಿ ಅರ್ಪಿಸು ' ಎಂದಿದೆ 13 ಅ. ದ 10 ನೇ ಪದ್ಯದಲ್ಲಿ ' ನಿನ್ನಲ್ಲಿ ಅನನ್ಯ ಭಕ್ತಿಯಿಂದ ಸ್ಥಿರಭಾವವಿಡು ' ಎಂದಿದೆ ಮುಂದೆ 30 ನೇ ಪದ್ಯದಲ್ಲಿ ' ಯಾವಾಗ ಎಲ್ಲ ಭೂತಗಳ ಪೃಥಕ್ತ್ವ ಅಂದರೆ ನಾನಾತ್ವವು ಒಂದಾಗಿ ಕಾಣಿಸತೊಡಗುವುದೋ, ಮತ್ತು ಈ ಒಂದರಿಂದಲೇ ಎಲ್ಲಾ ವಿಸ್ತಾರವೂ ಕಾಣಿಸತೊಡಗುವುದೋ, ಆಗಲೇ ಬ್ರಹ್ಮವು ಪ್ರಾಪ್ತವಾಗುವುದೆಂದು ತಿಳಿಯಬೇಕು ' ಎಂದಿದೆ. 15 ನೇ ಅ. ದ 19 ನೇ ಪದ್ಯದಲ್ಲಿ ' ಯಾರು ಮೋಹ ಬಿಟ್ಟು ನನ್ನನ್ನೇ ಪುರುಷೋತ್ತಮನೆಂದರಿಯುತ್ತಾರೋ ಅವರೇ ನನ್ನನ್ನು ಪಡೆಯುತ್ತಾರೆ ' ಎಂದಿದೆ 18 ನೇ ಅ. ದ 65 ಪದ್ಯದಲ್ಲಿ ' ನನ್ನಲ್ಲಿ ನಿನ್ನ ಮನವಿಡು, ನನ್ನ ಭಕ್ತನಾಗು, ನನ್ನ ಭಜನೆ ಮಾಡು, ನನ್ನ ವಂದನೆ ಮಾಡು ಎಂದಿದೆ. ಮೇಲ್ಕಂಡ ವಿವರಣೆಯಿಂದ ಮನುಷ್ಯನಿಗೆ ಬ್ರಹ್ಮದೊಂದಿಗೆ ಐಕ್ಯವನ್ನು ಸ್ಥಾಪಿಸುವುದೇ ಗೀತೋಪದೇಶದ ಸಾರವೆಂದು ತಿಳಿಯುತ್ತದೆ.

ಇಷ್ಟಂವರೆಗೆ ಹೇಳಿದ್ದರಲ್ಲಿ ಮೂರು ವಿಷಯ ಸಿಗುತ್ತದೆ —

1 ಗೀತೆಯು ಜೀವನ ವಿಜ್ಞಾನ — ಸೈನ್ಸ್ ಆಫ್ ಲೈಫ್ 2 ಗೀತೆಯು ಸೃಷ್ಟಿಯು ಅಂತರಾಳದಲ್ಲಿ ಏಕ, ಅವ್ಯಕ್ತ, ಕೂಟಸ್ಥ, ಚೇತನಸತ್ತೆಯನ್ನು ಪ್ರತಿಪಾದಿಸುತ್ತದೆ, 3 ಗೀತೆಯು ಆ ಸತ್ತೆಯೊಂದಿಗೆ ಮನುಷ್ಯನ ಐಕ್ಯವನ್ನು ಸ್ಥಾಪಿಸಲು ಸಂದೇಶವೀಯುತ್ತದೆ ಮುಂದೆ ನಡೆದು ಗೀತೆಯು ಬ್ರಹ್ಮದೊಂದಿಗೆ ಏಕಾತ್ಮತೆಯನ್ನು ಸ್ಥಾಪಿಸುವ ದಾರಿಯನ್ನು ತೋರಿಸಿದೆ, ಪೂರ್ಣ ಜೀವನಕ್ಕೆ ಗೀತೆಯು ಒಂದು ಯೋಜನೆಯನ್ನು ಮಾಡಿಟ್ಟಿದೆ ಅದು ಸರ್ವಾಂಗ ಪೂರ್ಣವಾದ ಯೋಜನೆ, ಈ ಯೋಜನೆಯನ್ನನುಸರಿಸಿ ಜೀವನ ನಡೆಸಿದರೇ ಮನುಷ್ಯನು ತತ್ವದರ್ಶನ ಪಡೆದು, ಪೂರ್ಣತೆಯನ್ನು ಪಡೆಯಬಲ್ಲನು.

ನಾವು ಯಾವುದಾದರೂ ತತ್ವವನ್ನು ಸಾಧಿಸಬೇಕೆಂದಾದರೆ ಪ್ರಯೋಗಶಾಲೆಗೆ ಹೋಗುತ್ತೇವೆ. ನಾನಾ ರೀತಿಯ ಯಂತ್ರಗಳ ಸಹಾಯದಿಂದ ಬೇರೆ, ಬೇರೆ ರಸಗಳ ವಿಶ್ಲೇಷಣ, ಸಂಮ್ಮಿಶ್ರಣ, ಪ್ರಸ್ಫುಟನ, ಪೃಥಕರಣಗಳನ್ನು ಮಾಡುತ್ತೇವೆ ಆಗ ರಾಸಾಯನಿಕ ಸತ್ಯದ ಭೌತಿಕ ತತ್ವದ ಸತ್ತೆ ಹತ್ತುತ್ತದೆ. ಆದರೆ ಈ ಅಕ್ಷರ, ಅವಿನಾಶಿ, ಚೇತನ ತತ್ವದ ವಿಶ್ಲೇಷಣ, ವಿಕೀಕರಣ, ಸಮೀಕರಣ, ಪರ್ಯಪೇಕ್ಷಣಗಳಿಗಾಗಿ ಯಾವ ಪ್ರಯೋಗಶಾಲೆಗೆ ಹೋಗಬೇಕೆಂದು ಗೀತೆಯು ಸಂದೇಶವೀಯುತ್ತದೆಯೋ, ಆ ಪ್ರಯೋಗಶಾಲೆಯೊಳಗೆ ನಾವು ಪ್ರವೇಶಿಸದೇ ಇದ್ದರೆ ಆ ತತ್ವವನ್ನು ಗೊತ್ತುಹಚ್ಚುವುದು ಹೇಗೆ ? ನೀವು ಪ್ರಯೋಗಶಾಲೆಯೊಳಗೂ ಹೋಗದೆ ಆ ತತ್ವವಿರುವ ವಿಷಯದಲ್ಲಿ ಸಂದೇಹವೂ ಪಟ್ಟರೆ, ಆಗಿದು ಯಾವುದೇ ತತ್ವ ಸಂಧಾನದ ವೈಜ್ಞಾನಿಕ ಪದ್ಧತಿಯಾಗಲಿಲ್ಲ.

ಗೀತೆಯು ಅದನೇ ಅ. ದ 10, 11, 12, 13 ನೇ ಪದ್ಯಗಳಲ್ಲಿ ವಿಶ್ಲೇಷಣದ ಪದ್ಧತಿಯನ್ನು ತಿಳಿಸಿದೆ — ' ಏಕಾಂತದಲ್ಲಿ ಒಬ್ಬಂಟಿಗನಾಗಿ ಕುಳಿತು ಚಿತ್ತವನ್ನು ಸಂಯಮಿತಿಗೊಳಿಸಬೇಕು ಯಾವುದೇ ಕಾಮನಾವಾಸನೆಯನ್ನೂ ಇಡದೆ, ಎತ್ತರವೂ ತಗ್ಗೂ ಅಲ್ಲದ ಸ್ಥಾನದಲ್ಲಿ ಆಸನ ಹಾಕಿಕೊಂಡು ಚಿತ್ತದ ವ್ಯಾಪಾರಗಳನ್ನು ತಡೆದು, ಮನಸ್ಸನ್ನು ಏಕಾಗ್ರಗೊಳಿಸಿ, ಯೋಗಾಭ್ಯಾಸ ಮಾಡಬೇಕು ಬೆನ್ನು ತಲೆ ಕುತ್ತಿಗೆಯನ್ನು ಸಮವಾಗಿಟ್ಟು, ನೆಟ್ಟಗೆ ಕುಳಿತು, ಅತ್ತಿತ್ತ ನೋಡದೆ, ಶಾಂತ ಅಂತಃಕರಣದಿಂದ ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಾ, ಮನಸ್ಸಯಮ ಮಾಡಿ, ಬ್ರಹ್ಮದಲ್ಲಿ ಚಿತ್ತವೇರಿಸಿ, ಬ್ರಹ್ಮಪರಾಯಣನಾಗುತ್ತಾ, ಬ್ರಹ್ಮದೊಂದಿಗೆ ಸೇರಿಹೋಗಬೇಕು. — ಸಶೇಷ.

Edited, Printed and Published by Dharma Prachara Nirata M. S. Krishna Rao. at the Satyavadi Press Chamrajpuram Mysore